**Witness duly sworn on 16.04.2026**

**Cross examination by Advocate for Respondent :**

ನನಗೆ ಈ ಕೇಸಿನ ಸಂಪೂರ್ಣ ಮಾಹಿತಿ ಇರುತ್ತದೆ. ಲಲಿತಾದ್ರಿಪುರ ಗ್ರಾಮದ ರೀಸರ್ವೆ ನಂಬರ್ 121 ಕ್ಷೇತ್ರ 1 ಎಕರೆ 38 ಗುಂಟೆ ನಮಗೆ ಸೇರಿದಂತಹ ಜಮೀನು ಎಂದರೆ ಸರಿ. ಸದರಿ ಜಮೀನನ್ನು ಮೂಡಾ ದವರು ಲಲಿತಾದ್ರಿಪುರ ಬಡವಾಣೆ ಮಾಡುವ ಸಲುವಾಗಿ ಸ್ವಾಧೀನಪಡಿಸಿಕೊಂಡಿದ್ದರು ಎಂದರೆ ಸರಿ. ಮೂಡಾ ದವರು 1 ಎಕರೆ 1,25,000/- ರೂ ನಿಗಧಿಪಡಿಸಿದ್ದರು ಎಂದರೆ ಸರಿ. ನಾವು ಆ ರೀತಿ ಪರಿಹಾರ ಪಡೆದುಕೊಂಡು 4 ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಸಿ.ಜೆ.ಎಂ ನ್ಯಾಯಾಲಯ ಮೈಸೂರಿನಲ್ಲಿ LAC NO. 545/2006 ಸಲ್ಲಿಸಿದ್ದೆವು ಎಂದರೆ ಸರಿ. ಸದರಿ LAC NO. 545/2006 ದಲ್ಲಿ ನ್ಯಾಯಾಲಯವು ದಿನಾಂಕ 10.08.2010 ರಂದು ಎಕೆರೆಗೆ 10,61,000/- ರೂ ನಿಗಧಿಪಡಿಸಿತ್ತು ಎಂದರೆ ಸರಿ. ಆ ಆದೇಶದ ಬಾಬ್ತು ನಮಗೆ 70,26,000/- ರೂ ಹಣ ಬರಬೇಕು ಎಂದು ಹೇಳಿ ಅಮಲ್ಜಾರಿ ಅರ್ಜಿ ಸಲ್ಲಿಸಿದ್ದೆವು ಎಂದರೆ ಸರಿ. ಆ ಅಮಲ್ಜಾರಿ ಅರ್ಜಿ ಸಂಖ್ಯೆ 138/2016 ಎಂದರೆ ಸರಿ. ನಾನು ಈಗ ನೋಡುತ್ತಿರುವ ವಕಾಲತ್ ಮೇಲಿರುವ ಸಹಿ ನನ್ನ ಸಹಿ ಇರುತ್ತದೆ. ಸಾಕ್ಷಿದಾರರು ನೋಡಿ ಗುರುತಿಸಿದಂತಹ ವಕಾಲತ್ ಮೇಲಿರುವ ಸಹಿ ಈ ಪ್ರಕರಣದಲ್ಲಿ ಸಲ್ಲಿಸಿರುವ ವಕಾಲತ್ ಇರುತ್ತದೆ. ನಾನು ಈಗ ನೋಡುತ್ತಿರುವ ಸಹಿಗಳು ನನ್ನ ಸಹಿಗಳು ಇರುತ್ತವೆ. ಸಾಕ್ಷಿದಾರರು ನೋಡಿ ಗುರುತಿಸಿದಂತಹ ಸಹಿಗಳು ಅಮಲ್ಜಾರಿ ಅರ್ಜಿ ಸಂಖ್ಯೆ 138/2016 ರಲ್ಲಿನ ಸಹಿಗಳು ಇರುತ್ತವೆ. ನಾನು ಈಗ ನೋಡುತ್ತಿರುವ ಸಹಿ ನನ್ನ ಸಹಿ ಇರುತ್ತದೆ. ಸಾಕ್ಷಿದಾರರು ನೋಡಿ ಗುರುತಿಸಿದಂತಹ ಸಹಿ ಉಳ್ಳ ದಾಖಲೆ ಅದೇ ಅಮಲ್ಜಾರಿ ಅರ್ಜಿಯಲ್ಲಿ ಸಲ್ಲಿಸಿರುವ ಜಂಟಿ ಮೆಮೋ ಇರುತ್ತದೆ. ನಾನು ಮತ್ತು ನನ್ನ ವಕೀಲರು ಲೋಕಾದಲತ್ ನಲ್ಲಿ 68,30,477/- ರೂಗಳಿಗೆ ಒಪ್ಪಿ ಸಹಿ ಮಾಡಿದ್ದೆವು ಎಂದರೆ ಹಣ ಬರುತ್ತದೆ ಎಂದು ಹೇಳಿದ್ದರು ಅದಕ್ಕೆ ಸಹಿ ಮಾಡಿದ್ದರು. ನಾನು ಸಹಿ ಮಾಡಿದ ರೀತಿಯಲ್ಲಿಯೇ ನನ್ನ ವಕೀಲರು ಸಹ

ಆ ಜಂಟಿ ಮೆಮೋ ಗೆ ಸಹಿ ಮಾಡಿದ್ದರು ಎಂದರೆ ಸರಿ. 68,30,477/- ರೂ ಪಡೆದುಕೊಳ್ಳಲು ಒಪ್ಪಿ ಜಂಟಿ ಮೆಮೋ ಗೆ ಸಹಿ ಮಾಡಿದ್ದೆ ಎಂದರೆ ಸರಿಯಲ್ಲ. LAC NO. 545/2006 ರಲ್ಲಿನ ಸಂಪೂರ್ಣ ಹಣ ಬಂದಿರುತ್ತದೆ ಮತ್ತು ನನಗೆ ತೃಪ್ತಿಯಾಗಿರುತ್ತದೆ ಎಂದು ಹೇಳಿ ಜಂಟಿ ಮೆಮೋ ಸಲ್ಲಿಸಿದ್ದೆವು ಎಂದರೆ ಸರಿಯಲ್ಲ. 68,00,000/- ರೂ ಬರಬೇಕಾಗಿತ್ತು ಆದ್ದರಿಂದ ಸಹಿ ಮಾಡಿದ್ದೆ. ನಾವುಗಳು 68,30,677/- ರೂಪಾಯಿಗಳನ್ನು ಪಡೆದುಕೊಂಡಿರುತ್ತೇವೆ ಎಂದರೆ ಸರಿ.

LAC NO. 545/2006 ದಿನಾಂಕ 10.08.2010 ರಂದು ತೀರ್ಮಾನ ಆದ ಮೇಲೆ ಈ ಪ್ರಕರಣದ ಅಪೀಲನ್ನು ಸಲ್ಲಿಸುವವರೆಗೆ ಹಿಂದೆ ಆದಂತಹ ಪರಿಹಾರದ ಹಣ ಸಾಕಾಗುವುದಿಲ್ಲ ಎಂದು ಹೇಳಿ ಅಪೀಲು ಸಲ್ಲಿಸಲು ತೊಂದರೆ ಇತ್ತು ಆ ತೊಂದರೆ ಎಂದರೆ ಹಣಕಾಸು ತೊಂದರೆ ಇತ್ತು ಮತ್ತು ನನ್ನ ಅಣ್ಣ ಜವಬ್ಬಾರಿಗಳನ್ನು ನೋಡಿಕೊಳ್ಳುತ್ತಿದ್ದ ಅವರು 2018 ರಲ್ಲಿ ತೀರಿ ಹೋಗಿದ್ದರು ಆನಂತರ ನಾನು ಜವಬ್ದಾರಿ ತೆಗೆದುಕೊಂಡಿದ್ದೆ ನನಗೆ ಕಾನೂನಿನ ಅರಿವು ಇಲ್ಲದೇ ಇದ್ದುದರಿಂದ ಅಪೀಲು ಸಲ್ಲಿಸಿರಲಿಲ್ಲ.

ಅಪೀಲನ್ನು ಸಲ್ಲಿಸಲು ನಮ್ಮ ವಕೀಲರಿಗೆ ನಾನೇ ಮಾಹಿತಿ ಕೊಟ್ಟಿದ್ದೆ. ನಾನು ಮಾಹಿತಿ ಕೊಟ್ಟ ಪ್ರಕಾರ ನಮ್ಮ ವಕೀಲರು ಬರೆದು ಓದಿ ಹೇಳಿದ ಮೇಲೆ ನಾನು ಸರಿ ಇರುತ್ತದೆ ಎಂದು ಸಹಿ ಮಾಡಿರುತ್ತೇನೆ ಎಂದರೆ ಸರಿ. ನಾನು ಅಪೀಲನ್ನು ಸಲ್ಲಿಸಲು ಆದಂತಹ ವಿಳಂಭದ ಬಗ್ಗೆ ಹೇಳಿದಂತಹ ಕಾರಣಗಳನ್ನು ಈ ಅಪೀಲಲ್ಲಿ ಬರೆಸಲು ತೊಂದರೆ ಇರಲಿಲ್ಲ, ಆ ಕಾರಣಗಳ ಬಗ್ಗೆ ನಮ್ಮ ವಕೀಲರಿಗೆ ಗೊತ್ತಿತ್ತು ಅವರು ಅದೇ ಕಾರಣಗಳನ್ನು ಅಪೀಲಲ್ಲಿ ಬರೆದಿರುತ್ತಾರೋ ಇಲ್ಲವೋ ನನಗೆ ಗೊತ್ತಿರುವುದಿಲ್ಲ. ನಾನು 10 ನೇ ತರಗತಿವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ. ನಾನು ನನ್ನ ಪ್ರಮಾಣ ಪತ್ರದಲ್ಲಿ ಮನೆಯ ಜವಬ್ದಾರಿಯನ್ನು ನನ್ನ ಅಣ್ಣ ನೋಡಿಕೊಳ್ಳುತ್ತಿದ್ದ ಆತ 2018 ರಲ್ಲಿ ಮರಣ ಹೊಂದಿದ್ದ ಆನಂತರ ನಾನು ಮನೆಯ ಜವಬ್ದಾರಿ ವಹಿಸಿಕೊಂಡಿದ್ದ ಹಣಕಾಸಿನ ತೊಂದರೆ ಇದ್ದುದರಿಂದ ಮತ್ತು ಕಾನೂನಿನ ಅರಿವು ಇಲ್ಲದೇ ಇದುದರಿಂದ

ಕೂಡಲೇ ಅಪೀಲನ್ನು ಸಲ್ಲಿಸಿರಲಿಲ್ಲ ಎನ್ನುವ ವಿಷಯವನ್ನು ಬರೆದಿರುವುದಿಲ್ಲ ಆದರೆ ನಮ್ಮ ವಕೀಲರಿಗೆ ಈ ವಿಷಯವನ್ನು ಹೇಳಿದ್ದೆ.

ನಾನು ನನ್ನ ಪ್ರಮಾಣ ಪತ್ರದಲ್ಲಿ ನಮ್ಮ ಪಕ್ಕದ ಜಮೀನವರಿಗೆ ಹೆಚ್ಚಿನ ಪರಿಹಾರ ಬಂದಿರುತ್ತದೆ ಅಂತ ಹೇಳಿದ ಕಾರಣ ವನ್ನು ಬಿಟ್ಟರೆ ಅಪೀಲು ಸಲ್ಲಿಸಲು ಆಗಿರುವ ವಿಳಂಭಕ್ಕೆ ಬೇರೆ ಯಾವುದೇ ಕಾರಣ ನೀಡಿರುವುದಿಲ್ಲ ಎಂದರೆ ಸರಿ ಆದರೆ ನಮಗೆ ಕೊಟ್ಟಿರುವ ಹಣ ಕಮ್ಮಿ ಇರುತ್ತದೆ ಎಂದು ಹೇಳಿ ಕಾರಣ ಹೇಳಿರುತ್ತೇವೆ. ನಾವು ಹೆಚ್ಚಿನ ಪರಿಹಾರವನ್ನು ಪಡೆದುಕೊಳ್ಳಬೇಕು ಎನ್ನುವ ಉದ್ದೇಶದಿಂದ ಕೂಡಲೇ ಅಪೀಲನ್ನು ಸಲ್ಲಿಸಲು ಅವಕಾಶ ಇದ್ದರೂ ಸಹ ಸುಳ್ಳು ಕಾರಣವನ್ನು ಹೇಳಿ ಸುಳ್ಳು ಅಪೀಲನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಅಮಲ್ಜಾರಿ ಅರ್ಜಿ ನಂಬರ್ 138/2016 ರಲ್ಲಿ ಜಂಟಿ ಮೆಮೊ ಸಲ್ಲಿಸಿ ಹಣ ತೆಗೆದುಕೊಂಡ ಬಗ್ಗೆ ಈ ಅಪೀಲಲ್ಲಿ ಹೇಳಲು ಏನಾದರೂ ತೊಂದರೆ ಇತ್ತಾ ಎಂದರೆ ನಮ್ಮ ವಕೀಲರು ಕೇಳಿರಲಿಲ್ಲ ಅದೇ ಕಾರಣಕ್ಕಾಗಿ ಆ ವಿಷಯವನ್ನು ಹೇಳಿರಲಿಲ್ಲ. ಎದುರುದಾರರು ಈ ಅಪೀಲಲ್ಲಿ ಹಾಜರಾಗಿ ತಕರಾರು ಸಲ್ಲಿಸಿರುವ ಬಗ್ಗೆ ನನಗೆ ಮಾಹಿತಿ ಇರುತ್ತದೆ. ತಕರಾರಿನಲ್ಲಿ ಏನು ಹೇಳಿರುತ್ತಾರೆ ಎನ್ನುವ ಬಗ್ಗೆ ಸಹ ನನಗೆ ಮಾಹಿತಿ ಇರುತ್ತದೆ ಎಂದರೆ ಸರಿ. ನಾನು ನ್ಯಾಯಾಲಯದಲ್ಲಿ ಬಂದು ಸಾಕ್ಷಿ ಹೇಳುವ ಪೂರ್ವದಲ್ಲಿ ಎದುರುದಾರರು ಏನು ತಕರಾರು ಸಲ್ಲಿಸಿರುತ್ತಾರೆ ಎಂದು ಕೇಳಿ ತಿಳಿದುಕೊಂಡಿರುತ್ತೇನೆ. ಲೋಕಾದಲತ್ ನಲ್ಲಿ ಅಮಲ್ಜಾರಿ ಅರ್ಜಿ ನಂಬರ್ 138/2016 ಪ್ರಕರಣದಲ್ಲಿ ಜಂಟಿ ಮೆಮೊ ಸಲ್ಲಿಸಿರುವುದು ಸುಳ್ಳು ಎಂದು ಹೇಳಿ ಪ್ರಮಾಣ ಪತ್ರ ಸಲ್ಲಿಸಲು ಏನಾದರೂ ತೊಂದರೆ ಇತ್ತಾ ಎಂದರೆ ನನಗೆ ಈ ಬಗ್ಗೆ ಗೊತ್ತಿರಲಿಲ್ಲ.

LAC NO. 545/2006, ಅಮಲ್ಜಾರಿ ಅರ್ಜಿ ನಂಬರ್ 138/2016 ಮತ್ತು ಈ ಅಪೀಲನ್ನು ಸಲ್ಲಿಸಿರುವವರು ಒಬ್ಬರೇ ವಕೀಲರು ಎಂದರೆ ಸರಿ. ಎದುರುದಾರರು ನಮ್ಮ ಜಮೀನನ್ನು ಸ್ವಾಧೀನ ಪಡಿಸಿಕೊಂಡ ಬಗ್ಗೆ ನಾವುಗಳು ಕಾನೂನುಬದ್ದ ಪರಿಹಾರ ಪಡೆದುಕೊಂಡಿರುವುದರಿಂದ

ನಾವುಗಳು ಹೆಚ್ಚಿನ ಪರಿಹಾರ ಪಡೆಯಲು ಬರುವುದಿಲ್ಲ ಎಂದರೆ ಸರಿಯಲ್ಲ. ನಾವುಗಳು ಹೆಚ್ಚಿನ ಪರಿಹಾರ ಪಡೆದುಕೊಳ್ಳಬೇಕು ಎನ್ನುವ ಉದ್ದೇಶದಿಂದ ಸುಳ್ಳು ಕಾರಣ ಹೇಳಿ ಈ ಅಪೀಲು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**TYPED TO MY DICTATION IN THE OPEN COURT.**

***R. O. I. & A. C.,***

***IV ADJ.,***
***MYSORE.***